

ಮೂಲಕ ಅಳವಡಿಸಲಿಕ್ಕೆ ಸಾಧ್ಯವಿದೆ. ಇದರಿಂದಾಗಿ, ಮೆದುಳು ನಿಷ್ಕ್ರಿಯವಾದ ವ್ಯಕ್ತಿಯನ್ನು ಉಳಿಸಿಕೊಳ್ಳುವುದು ಸಾಧ್ಯವಾಗದಿದ್ದರೂ, ಆ ವ್ಯಕ್ತಿಯ ಅಂಗಾಂಗಗಳ ಮೂಲಕ ಜೀವನ್ಮರಣದ ಮಧ್ಯೆ ಹೋರಾಡುವ ಕೆಲವರನ್ನು ಉಳಿಸಿಕೊಳ್ಳುವುದು ಸಾಧ್ಯವಿದೆ.

## ಏನಿದು ಅಂಗಾಂಗ ದಾನ?

ವ್ಯಕ್ತಿ ಆಕಸ್ಮಿಕವಾಗಿ ಮೃತಪಟ್ಟ ಬಳಿಕ, ಆತನ ಆರೋಗ್ಯವಂತ ಅಂಗಗಳನ್ನು ಇತರರಿಗೆ ದಾನ ಮಾಡುವ ಪ್ರಕ್ರಿಯೆಯೇ 'ಅಂಗಾಂಗ ದಾನ'. ಈ ಅಂಗಾಂಗ ದಾನಕ್ಕೆ ವಯಸ್ಸಿನ ಮಿತಿಯಿಲ್ಲ.

ಅಂಗ ದಾನವು ಒಂದು ವೈದ್ಯಕೀಯ ಕಸಿ ವಿಧಾನವಾಗಿದೆ. ಇಲ್ಲಿ ವ್ಯಕ್ತಿಯ ಮೆದುಳು ನಿಷ್ಕ್ರಿಯವಾದ ಬಳಿಕ, ಉಳಿದ ಅಂಗಗಳನ್ನು ದಾನವಾಗಿ ಪಡೆದು ಅಗತ್ಯವಿರುವ ಇನ್ನೊಬ್ಬ ರೋಗಿಗೆ ಕಸಿ ಮೂಲಕ ವರ್ಗಾಯಿಸಲಾಗುತ್ತದೆ.

ಭಾರತದಲ್ಲಿ ಅಂಗಾಂಗ ದಾನದ ಅರಿವು ಜನರಲ್ಲಿ ಬಹಳ ಕಡಿಮೆ ಇದೆ. ಆದರೆ, ಅಂಗಾಂಗಗಳ ಬೇಡಿಕೆ ಅಗಾಧವಾಗಿದೆ. ಅಂಕಿಅಂಶವೊಂದರ ಪ್ರಕಾರ,

